ಕರ್ನಾಟಕ ಸರ್ಕಾರ

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ ಬೆಂಗಳೂರು-560 003

ಸಂಖ್ಯೆ:ಎಸ್5/ಗ.ಯಂ.ಶಿ.ಪ/ಮಾರ್ಚ್-2021/ 29/2020-21 ದಿನಾಂಕ:16.02.2021

## ಅಧಿಸೂಚನೆ

ವಿಷಯ: ಮಾರ್ಚ್-2021 ರ ಮಾಹೆಯಲ್ಲಿ ನಡೆಯಲಿರುವ ಗಣಕಯಂತ್ರ ಶಿಕ್ಷಣ ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಇಡಿ:135ಎಸ್‌ಒಹೆಚ್ 2011 ದಿನಾಂಕ:28.05.2013
2. ಆಯುಕ್ತರು, ಸಾ.ಶಿ.ಇಲಾಖೆ ಮತ್ತು ಅಧ್ಯಕ್ಷರು, ಕ.ಪ್ರೌ.ಶಿ.ಪ.ಮಂಡಳಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:02.01.2019 ರಂದು ನಡೆದ ಸಭಾ ನಡಾವಳಿ.
3. ಸರ್ಕಾರದ ಆದೇಶ ಸಂಖ್ಯೆ: ಇಡಿ 236 ಎಸ್ ಎಲ್ ಬಿ 2019 ಬೆಂಗಳೂರು ದಿನಾಂಕ:13ನೇ ಡಿಸೆಂಬರ್ 2019

****

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ವತಿಯಿಂದ ಮಾರ್ಚ್-2021 ರ ಮಾಹೆಯಲ್ಲಿ ನಡೆಯುವ ಆಫೀಸ್ ಆಟೋಮೇಷನ್ (O.A.) ಹಾಗೂ ಗ್ರಾಫಿಕ್ ಡಿಸೈನರ್ ಕೋರ್ಸ್ (G.D.C) ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಈ ಪರೀಕ್ಷೆಗೆ ಹಾಜರಾಗಲು ಅರ್ಜಿಗಳನ್ನು ಸಂಬಂಧಿಸಿದ ಗಣಕಯಂತ್ರ ಶಿಕ್ಷಣ ಸಂಸ್ಥೆಗಳ ಮುಖಾಂತರ ಸಲ್ಲಿಸಬಹುದಾಗಿದೆ. ಗಣಕಯಂತ್ರ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ತಮ್ಮ ಸಂಸ್ಥೆಯಿಂದ ಹಾಜರಾಗುವ ಅರ್ಹ ಅಭ್ಯರ್ಥಿಗಳ ವಿವರಗಳನ್ನು ಮಂಡಳಿಯ sslc.karnataka.gov.in ಜಾಲತಾಣದಲ್ಲಿ Login/Other Exams/Computer Examination ನಲ್ಲಿ Institute Login ಮೂಲಕ Upload ಮಾಡಲು ಸೂಚಿಸಿದೆ.

### ಗಣಕಯಂತ್ರ ಶಿಕ್ಷಣ ಪರೀಕ್ಷೆ ತೆಗೆದುಕೊಳ್ಳಲು ಅಗತ್ಯವಿರುವ ಅರ್ಹತೆ

- ಸರ್ಕಾರದಿಂದ ನೋಂದಣಿಯಾಗಿ ಮಾನ್ಯತೆಯನ್ನು ಪಡೆದ ಕಂಪ್ಯೂಟರ್ ಸಂಸ್ಥೆಗಳಲ್ಲಿ ಅಭ್ಯಾಸ ಮಾಡುತ್ತಿರುವ ಅಭ್ಯರ್ಥಿಗಳು ಮಂಡಳಿಯು ನಡೆಸುವ ಆಫೀಸ್ ಆಟೋಮೇಷನ್ (O.A.) ಹಾಗೂ ಗ್ರಾಫಿಕ್ ಡಿಸೈನರ್ ಕೋರ್ಸ್ (G.D.C) ವಿಷಯದ ಪರೀಕ್ಷೆಗೆ ಹಾಜರಾಗಲು ಅರ್ಹತೆ ಪಡೆದಿರುತ್ತಾರೆ.
- ಆಫೀಸ್ ಆಟೋಮೇಷನ್ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಯು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ನಡೆಸುವ ಎಸ್.ಎಸ್.ಎಲ್.ಸಿ. ಪರೀಕ್ಷೆ/10ನೇ ತರಗತಿ (CBSE, ICSE)/ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
- ಗ್ರಾಫಿಕ್ ಡಿಸೈನರ್ ಕೋರ್ಸ್ ಪರೀಕ್ಷೆ ತೆಗೆದುಕೊಳ್ಳುವ ಅಭ್ಯರ್ಥಿಗಳು ಆಫೀಸ್ ಆಟೋಮೇಷನ್ ಪರೀಕ್ಷೆ (O.A.) ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
- ಈ ಪರೀಕ್ಷೆಗಳು 6 ತಿಂಗಳ ಕೋರ್ಸ್ ಆಗಿದ್ದು, ಸಂಸ್ಥೆಗಳು ಕನಿಷ್ಠ 80 ದಿನಗಳು ಶಾಲಾ ಕಾರ್ಯವನ್ನು (Working days) ನಿರ್ವಹಿಸಿರಬೇಕು ಹಾಗೂ ಅಭ್ಯರ್ಥಿಗಳು ಕನಿಷ್ಠ ಶೇಕಡ 75 ರಷ್ಟು ಹಾಜರಾತಿ **ಹೊಂದಿರಬೇಕು.**

### ಪರೀಕ್ಷಾ ವಿಷಯ ಮತ್ತು ಪರೀಕ್ಷಾ ಶುಲ್ಕದ ವಿವರ

ಆಫೀಸ್‌ಆಟೋಮೇಷನ್: ((O.A.)

| ಪರೀಕ್ಷಾ ವಿಷಯ | ವಿಷಯ ಸಂಕೇತ | ಪರೀಕ್ಷಾ ಶುಲ್ಕದ ವಿವರ | | ಒಟ್ಟು ಶುಲ್ಕ |
|---|---|---|---|---|
| | | ಪರೀಕ್ಷಾ ಶುಲ್ಕ | ಲ್ಯಾಮಿನೇಷನ್ ಶುಲ್ಕ | |
| ಆಫೀಸ್‌ಆಟೋಮೇಷನ್ (ಥಿಯರಿ) | 41-X | 700-00 | 20-00 | 720-00 |
| ಆಫೀಸ್‌ಆಟೋಮೇಷನ್ **(ಪ್ರಾಯೋಗಿಕ)** | 41-Y | | | |

ಗ್ರಾಫಿಕ್ ಡಿಸೈನರ್ ಕೋರ್ಸ್: (G.D.C)

| ಪರೀಕ್ಷಾ ವಿಷಯ | ವಿಷಯ ಸಂಕೇತ | ಪರೀಕ್ಷಾ ಶುಲ್ಕದ ವಿವರ | | ಒಟ್ಟು ಶುಲ್ಕ |
|---|---|---|---|---|
| | | ಪರೀಕ್ಷಾ ಶುಲ್ಕ | ಲ್ಯಾಮಿನೇಷನ್ ಶುಲ್ಕ | |
| ಗ್ರಾಫಿಕ್‌ಡಿಸೈನರ್‌ಕೋರ್ಸ್ (ಥಿಯರಿ) | 42-X | 1050–00 | 20–00 | 1070–00 |
| ಗ್ರಾಫಿಕ್‌ಡಿಸೈನರ್‌ಕೋರ್ಸ್ (ಪ್ರಾಯೋಗಿಕ) | 42-Y | | | |

**ನೆಫ್ಟ್ ಚಲನ್ ಹಾಗೂ ಅರ್ಜಿಗಳನ್ನು ಸಲ್ಲಿಸಲು ನಿಗಧಿಗೊಳಿಸಿರುವ ದಿನಾಂಕಗಳ ವಿವರ.**

| ಕ್ರಸಂ | ವಿವರ | ದಿನಾಂಕ: |
|---|---|---|
| 01 | ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು ಪ್ರಥಮ ಮಾನ್ಯತೆ ಅಥವ ಮಾನ್ಯತೆ ನವೀಕರಣ ಪ್ರತಿಯನ್ನು ತಮ್ಮ ಲಾಗಿನ್‌ನಲ್ಲಿ ಆನ್ ಲೈನ್ ಮೂಲಕ ಅನುಮೋದಿಸುವುದು. | 17.02.2021 ರಿಂದ 01.03.2021 |
| 02 | ಪ್ರಥಮ ಮಾನ್ಯತೆ ಅಥವ ಮಾನ್ಯತೆ ನವೀಕರಣ ಪ್ರತಿಯನ್ನು ಅಪ್‌ಲೋಡ್ ಮಾಡುವುದು ಹಾಗೂ ಶಾಲಾ–ಸಂಕೇತ ನವೀಕರಣ ಶುಲ್ಕ ರೂ.305/– ಗಳನ್ನು ಪಾವತಿಸುವುದು. | 17.02.2021 ರಿಂದ 01.03.2021 |
| 03 | ಮಂಡಳಿ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮೂಲಕ ಅಭ್ಯರ್ಥಿಗಳ ಮಾಹಿತಿಯನ್ನು ಅಪ್ ಲೋಡ್ ಮಾಡುವುದು (ದಂಡ ರಹಿತವಾಗಿ) | 17.02.2021 ರಿಂದ 26.02.2021 |
| 04 | ಮಂಡಳಿ ಜಾಲತಾಣದಲ್ಲಿ ಸಂಸ್ಥೆಯ ಲಾಗಿನ್ ಮೂಲಕ ಅಭ್ಯರ್ಥಿಗಳ ಮಾಹಿತಿಯನ್ನು **ದಂಡ ಸಹಿತವಾಗಿ (ದಿನವೊಂದಕ್ಕೆ ರೂ. 150/– ರಂತೆ)** ಅಪ್ ಲೋಡ್ ಮಾಡಲು **ಅಂತಿಮ ದಿನಾಂಕ:** | 01.03.2021 |
| 05 | ಮಂಡಳಿ ಜಾಲತಾಣದಲ್ಲಿ ಸಂಬಂಧಿಸಿದ ಗಣಕಯಂತ್ರ ಶಿಕ್ಷಣ ಸಂಸ್ಥೆಯ ಲಾಗಿನ್ ಮೂಲಕ ಅಭ್ಯರ್ಥಿಗಳ ಪರೀಕ್ಷಾ ಶುಲ್ಕವನ್ನು ಈ ಮೂಲಕ ಜಮೆ ಮಾಡುವುದು<br>1. ಚಲನ್ ಮುದ್ರಿಸಿಕೊಂಡು (ನೆಫ್ಟ್/ಆರ್.ಟಿ.ಜಿ.ಎಸ್) ಮೂಲಕ<br>2. ಆನ್‌ಲೈನ್ (Debit Card/Credit Card/Net Banking) ಮೂಲಕ | 02.03.202 ರಿಂದ 04.03.2021 |
| 06 | ನಾಮಿನಲ್ ರೋಲ್, ಶುಲ್ಕ ಪಾವತಿಸಿದ ಚಲನ್‌ನ ಮೂಲ ಪ್ರತಿ ಹಾಗೂ ಸಂಬಂಧಿಸಿದ ಇತರೆ ದಾಖಲೆಗಳನ್ನು ಡಯಟ್‌ಗಳಿಗೆ ಸಲ್ಲಿಸಿ ಡಯಟ್ ಲಾಗಿನ್‌ನಲ್ಲಿ ಉಪನಿರ್ದೇಶಕರು (ಅಭಿವೃದ್ಧಿ) ರವರು ಅನುಮೋದಿಸುವುದು. | 04.03.2021 ರಿಂದ 8.03.2021 |
| 07 | ನಾಮಿನಲ್ ರೋಲ್, ಶುಲ್ಕ ಪಾವತಿಸಿದ ಚಲನ್‌ನ ಮೂಲ ಪ್ರತಿ ಹಾಗೂ ಸಂಬಂಧಿಸಿದ ಇತರೆ ದಾಖಲೆಗಳನ್ನು ಉಪನಿರ್ದೇಶಕರು (ಅಭಿವೃದ್ಧಿ) ರವರು ಮಂಡಳಿಗೆ ಕಳುಹಿಸುವುದು. | 08.03.2021 ರಿಂದ 12.03.2021 |

**ಆನ್‌ಲೈನ್ ಮೂಲಕ ಪ್ರಥಮ ಮಾನ್ಯತೆ ಅಥವ ಮಾನ್ಯತೆ ನವೀಕರಣ ಪ್ರತಿ ಅಪ್‌ಲೋಡ್, ಶಾಲಾ-ಸಂಕೇತ ನವೀಕರಣ ಶುಲ್ಕ ಹಾಗೂ ಪರೀಕ್ಷಾ ಶುಲ್ಕ ಪಾವತಿಸಲು ಗಣಕಯಂತ್ರ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಗೆ ಸೂಚನೆಗಳು;**

1. ಮಾರ್ಚ್-2021 ರ ಮಾಹೆಯಲ್ಲಿ ನಡೆಯುವ ಆಫೀಸ್ ಅಟೋಮೇಷನ್ (O.A.) ಹಾಗೂ ಗ್ರಾಫಿಕ್ ಡಿಸೈನರ್ ಪರೀಕ್ಷೆ(G.D.C) ಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಗಣಕ ಯಂತ್ರ ಶಿಕ್ಷಣಸಂಸ್ಥೆಗಳ ಮುಖ್ಯಸ್ಥರು ತಮ್ಮ Institute Login ನಲ್ಲಿ ಸಂಸ್ಥೆಯ ಪ್ರಥಮ ಮಾನ್ಯತೆ ಅಥವ ಮಾನ್ಯತೆ ನವೀಕರಣ ಪ್ರತಿಯನ್ನು **pdf ನಮೂನೆ (Up to 1mb size)** ನಲ್ಲಿ **Scan** ಮಾಡಿ Upload ಮಾಡುವುದು.
2. **ಶಾಲಾ-ಸಂಕೇತ ನವೀಕರಣ** ಶುಲ್ಕ ಹಾಗೂ ಪರೀಕ್ಷಾ ಶುಲ್ಕವನ್ನು Institute Login ನಲ್ಲಿ **ಆನ್‌ಲೈನ್** ಮೂಲಕ ಪಾವತಿಸಲು ಅವಕಾಶ ಕಲ್ಪಿಸಿದ್ದು, Debit Card/Credit Card/Net Banking ಮೂಲಕ ಶುಲ್ಕ ಪಾವತಿಸಬೇಕಾಗಿರುತ್ತದೆ.
3. ಶಾಲಾ-ಸಂಕೇತ ನವೀಕರಣ ಶುಲ್ಕ ಹಾಗೂ ಪರೀಕ್ಷಾ ಶುಲ್ಕವನ್ನು **ಚಲನ್ ಮೂಲಕ** ಸಹ ಪಾವತಿಸಲು Institute Login ನಲ್ಲಿ ಅವಕಾಶ ಕಲ್ಪಸಿದ್ದು, ಈ ಸೇವೆಯ ಮೂಲಕ ಶುಲ್ಕ ಪಾವತಿಸಲು ಕಡ್ಡಾಯವಾಗಿ Institute Login ನಲ್ಲಿ Generate ಆದ Challan ಪ್ರತಿಯನ್ನು ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ NEFT/RTGS ಮುಖಾಂತರ ಪಾವತಿಸಬಹುದಾಗಿರುತ್ತದೆ.
4. ಪರೀಕ್ಷಾ ಶುಲ್ಕವನ್ನು ಕಡ್ಡಾಯವಾಗಿ ಸಂಸ್ಥೆಯ Login ನಲ್ಲಿ ಲಭ್ಯ ಮಾಡಲಾಗುವ ಚಲನ್ ಹೊರತುಪಡಿಸಿ ಮತ್ಯಾವುದೇ ಚಲನ್/ ಡಿ.ಡಿ./ ಚೆಕ್ ಮೂಲಕ ಮಾಡಲಾದ ಪಾವತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.
5. ಪ್ರಥಮ ಮಾನ್ಯತೆ/ಮಾನ್ಯತೆ ನವೀಕರಣ ಪ್ರತಿಯನ್ನು Institute Login ನಲ್ಲಿ Upload ಮಾಡಿ ಸಂಬಂಧಪಟ್ಟ **ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು ಅನುಮೋದಿಸಿದ ನಂತರವಷ್ಟೆ** ಆನ್‌ಲೈನ್ ನಲ್ಲಿ ಪರೀಕ್ಷಾ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ.

**ಮಾರ್ಚ್-2021 ರ ಮಾಹೆಯಲ್ಲಿ ನಡೆಯುವ ಗಣಕಯಂತ್ರ ಶಿಕ್ಷಣ ಪರೀಕ್ಷೆಗೆ ಸಂಬಂಧಿಸಿದಂತೆ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರುಗಳ ಪಾತ್ರ**

1. ಗಣಕಯಂತ್ರ ಶಿಕ್ಷಣ ಸಂಸ್ಥೆಗಳಿಗೆ ಪ್ರಥಮ ಮಾನ್ಯತೆ ಅಥವ ಮಾನ್ಯತೆ ನವೀಕರಣದ ಸಕ್ಷಮ ಪ್ರಾಧಿಕಾರ ಸಂಬಂಧಪಟ್ಟ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರವರಾಗಿರುತ್ತಾರೆ.
2. ಪ್ರಥಮ ಮಾನ್ಯತೆ ಅಥವ ಮಾನ್ಯತೆ ನವೀಕರಣ ಪ್ರತಿಯನ್ನು ಅನುಮೋದಿಸಲು ಸಂಬಂಧಪಟ್ಟ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರಿಗೆ ಲಾಗಿನ್ ವ್ಯವಸ್ಥೆ ಕಲ್ಪಿಸಲಾಗಿದೆ.
3. ಮಾರ್ಚ್-2021 ರ ಮಾಹೆಯ ಗಣಕಯಂತ್ರ ಶಿಕ್ಷಣ ಪರೀಕ್ಷೆಯ ಅರ್ಜಿಗಳನ್ನು ಆನ್ ಲೈನ್ ಮೂಲಕ ಸ್ವೀಕರಿಸುವ ಸಂದರ್ಭದಲ್ಲಿ ಗಣಕಯಂತ್ರ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ತಮ್ಮ ಸಂಸ್ಥೆಯ ಪ್ರಥಮ ಮಾನ್ಯತೆ ಅಥವ ಮಾನ್ಯತೆ ನವೀಕರಣ ಪ್ರತಿಯನ್ನು **pdf ನಮೂನೆಯಲ್ಲಿ 1mb ಗಾತ್ರದೊಳಗೆ** Upload ಮಾಡಲು ತಿಳಿಸಿದೆ. ಸದರಿ ಮಾಹಿತಿಯನ್ನು ಪರಿಶೀಲಿಸಿ, ಪ್ರಥಮ ಮಾನ್ಯತೆ ಅಥವ ಮಾನ್ಯತೆ ನವೀಕರಣ ಪ್ರತಿಯನ್ನು ಆನ್‌ಲೈನ್ ಮೂಲಕ ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರ Login ನಲ್ಲಿ ಅನುಮೋದಿಸಲು/ತಿರಸ್ಕರಿಸಲು ಅವಕಾಶ ಕಲ್ಪಿಸಿದೆ.
4. ಒಂದು ವೇಳೆ ಸಂಸ್ಥೆಗಳ ಪ್ರಥಮ ಮಾನ್ಯತೆ ಅಥವ ಮಾನ್ಯತೆ ನವೀಕರಣ ಪ್ರತಿಯನ್ನು ಒದಗಿಸಲಾದ Login ನಲ್ಲಿ ತಿರಸ್ಕರಿಸಿದಲ್ಲಿ Remarks ಕಾಲಂನಲ್ಲಿ ಸಕಾರಣವನ್ನು ಕಡ್ಡಾಯವಾಗಿ ನಮೂದಿಸುವುದು. ತಿರಸ್ಕೃತಗೊಂಡ ಗಣಕಯಂತ್ರ ಶಿಕ್ಷಣ ಸಂಸ್ಥೆಯವರು ಸರಿಯಾದ ಮಾಹಿತಿಯನ್ನು ಒದಗಿಸಿದಲ್ಲಿ ಮತ್ತೊಮ್ಮೆ ಅನುಮೋದಿಸಲು ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರ Login ನಲ್ಲಿ ಅವಕಾಶ ಕಲ್ಪಿಸಿದೆ.
5. ಪ್ರಥಮ ಮಾನ್ಯತೆ ಅಥವ ಮಾನ್ಯತೆ ನವೀಕರಣ ಪ್ರತಿಯನ್ನು ವಿಭಾಗೀಯ ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹನಿರ್ದೇಶಕರು ಅನುಮೋದಿಸಿದ ನಂತರವಷ್ಟೆ ಅಭ್ಯರ್ಥಿಗಳು ಆನ್ ಲೈನ್ ಮೂಲಕ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗುತ್ತದೆ.

<u>ಅರ್ಜಿಗಳನ್ನು ಸಲ್ಲಿಸಲು ಸಂಸ್ಥೆಯ ಮುಖ್ಯಸ್ಥರು ಪಾಲಿಸಬೇಕಾದ ಸೂಚನೆಗಳು:</u>

1. ಮಾರ್ಚ್–2021 ರ ಗಣಕಯಂತ್ರ ಶಿಕ್ಷಣ ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳ ನೋಂದಣಿ ಮಾಹಿತಿಯನ್ನು ಮಂಡಳಿ ಜಾಲತಾಣದಲ್ಲಿ Login/Other Exams/Computer Examination ನಲ್ಲಿ Institute Login ಮೂಲಕ Upload ವಮಾಡುವುದು.
2. ಪತ್ರ ವ್ಯವಹಾರಕ್ಕಾಗಿ ಸಂಸ್ಥೆಯ ಚಾಲ್ತಿಯಲ್ಲಿರುವ ಅಂಚೆ ವಿಳಾಸ, ದೂರವಾಣಿ/ಮೊಬೈಲ್ ಸಂಖ್ಯೆ ಹಾಗೂ E-Mail ವಿಳಾಸ ತಪ್ಪದೆ ನಮೂದಿಸುವುದು. ತಪ್ಪಾಗಿ ನಮೂದಿಸಲಾಗುವ ಮಾಹಿತಿಗಳಿಗೆ ಸಂಸ್ಥೆಯ ಮುಖ್ಯಸ್ಥರೇ ಜವಾಬ್ದಾರರಾಗಿರುತ್ತಾರೆ.
3. **ಯಾವುದೇ ವರ್ಗದ ಅಭ್ಯರ್ಥಿಗಳಿಗೆ ಪರೀಕ್ಷಾ ಶುಲ್ಕ ವಿನಾಯಿತಿ ಇರುವುದಿಲ್ಲ.**
4. On line ಮೂಲಕ ಸಲ್ಲಿಸಿದ ಅರ್ಜಿಗಳಲ್ಲಿ ತಿದ್ದುಪಡಿಗಳಿದ್ದಲ್ಲಿ ನಿಗಧಿಪಡಿಸಿದ ದಿನಾಂಕದೊಳಗೆ ತಿದ್ದುಪಡಿ ಮಾಡಿಕೊಳ್ಳತಕ್ಕದ್ದು.
5. ನಿಗಧಿ ಪಡಿಸಿದ ದಿನಾಂಕದ ನಂತರ ವಿಷಯ ಸಂಕೇತದ ಬದಲಾವಣೆಗೆ ಅರ್ಜಿ ಸಲ್ಲಿಸಿದಲ್ಲಿ <u>**ರೂ.500.00**</u> ದಂಡ ವಿಧಿಸಲಾಗುವುದು. ಮಂಡಳಿಯ ಗಮನಕ್ಕೆ ತರದೇ ಪರೀಕ್ಷಾ ಕೇಂದ್ರದಲ್ಲಿ ವಿಷಯ ಸಂಕೇತದ ಬದಲಾವಣೆಗೆ ಅವಕಾಶ ಇರುವುದಿಲ್ಲ. ಹಾಗೊಂದು ವೇಳೆ ಯಾವುದೇ ಪರೀಕ್ಷಾ ಕೇಂದ್ರದಲ್ಲಿ ವಿಷಯ ಸಂಕೇತದ ಬದಲಾವಣೆ ಮಾಡಿಕೊಂಡಿರುವುದು ಕಂಡು ಬಂದಲ್ಲಿ ಅಂತಹ ಅಭ್ಯರ್ಥಿಯ ಉತ್ತರ ಪತ್ರಿಕೆಯನ್ನು ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದಿಲ್ಲ.
6. ಉಪನಿರ್ದೇಶಕರು, (ಅಭಿವೃದ್ಧಿ) ರವರು (ಡಯಟ್) ಗೊತ್ತುಪಡಿಸಿದ ಪರೀಕ್ಷಾ ಕೇಂದ್ರದಲ್ಲಿಯೇ ಪರೀಕ್ಷೆಯನ್ನು ತೆಗೆದುಕೊಳ್ಳುವುದು.
7. **ಪ್ರಾಯೋಗಿಕ ಪರೀಕ್ಷೆಗೆ ಸಂಬಂಧಿಸಿದಂತೆ, ಮಂಡಳಿಯಿಂದ ನಿಗಧಿ ಪಡಿಸಿದ ಬ್ಯಾಚ್‌ಗಳಲ್ಲಿ ಯಾವುದೇ ಬದಲಾವಣೆಗೆ ಅವಕಾಶವಿರುವುದಿಲ್ಲ.**
8. **ಪರೀಕ್ಷಾ ಅರ್ಜಿಗಳಲ್ಲಿ ಅಭ್ಯರ್ಥಿಗಳ ಭಾವಚಿತ್ರ 60 ರಿಂದ 80 KB ಹಾಗೂ ಸಹಿಯನ್ನು 20 ರಿಂದ 50 KB JPEG ನಮೂನೆಯಲ್ಲಿರಬೇಕು.**
9. **ಭಾವಚಿತ್ರ ನೇರ ಭಂಗಿಯಲ್ಲಿರಬೇಕು ಹಾಗೂ ಭಾವಚಿತ್ರವನ್ನು ಮಾತ್ರವೇ ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡುವುದು. ಭಾವಚಿತ್ರ ಅಂಟಿಸಿರುವ ಇಡೀ ಪೇಪರ್ ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡುವಂತಿಲ್ಲ.**
10. ಆಫೀಸ್ ಅಟೋಮೇಷನ್ (O.A.) ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು, ಮಾರ್ಚ್ 2002 ಹಾಗೂ ಅದಕ್ಕಿಂತ ಹಿಂದಿನ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ. ಪರೀಕ್ಷೆ/10ನೇ ತರಗತಿ (CBSE, ICSE)/ತತ್ಸಮಾನ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿದ್ದಲ್ಲಿ ಅಂತಹ ಅಭ್ಯರ್ಥಿಗಳಿಗೆ ಸಂಬಂಧಿಸಿದಂತೆ ಸಂಸ್ಥೆಯ ಮುಖ್ಯಸ್ಥರು ಅಂಕಪಟ್ಟಿಗಳನ್ನು ಪರಿಶೀಲಿಸಿ ಸೂಕ್ತ ಕಾಲಂನಲ್ಲಿ **pdf ನಮೂನೆ ( Up to 1mb size)** ಯಲ್ಲಿ Upload ಮಾಡುವುದು ಹಾಗೂ ಅಂತಹ ಅಭ್ಯರ್ಥಿಗಳ On line ಅರ್ಜಿಯಲ್ಲಿನ ಎಲ್ಲಾ ಕಾಲಂಗಳನ್ನು ಕಡ್ಡಾಯವಾಗಿ ಭರ್ತಿ ಮಾಡುವುದು.
11. ಆಫೀಸ್ ಅಟೋಮೇಷನ್ (O.A.) ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು 2003 ಹಾಗೂ ನಂತರದ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳ ಮಾಹಿತಿಯು ಅಪ್‌ಲೋಡ್ ಮಾಡುವಾಗ ಎಸ್.ಎಸ್.ಎಲ್.ಸಿ ನೋಂದಣಿ ಸಂಖ್ಯೆಯನ್ನು ನಮೂದಿಸಿದಲ್ಲಿ AUTO FETCH ಆಗುತ್ತವೆ. ಉಳಿದ ಮಾಹಿತಿಗಳನ್ನು ಸಂಸ್ಥೆಯ ಮುಖ್ಯಸ್ಥರು ಭರ್ತಿ ಮಾಡುವುದು.
12. ಗ್ರಾಫಿಕ್ ಡಿಸೈನರ್ (G.D.C) ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳು ಆಫೀಸ್ ಅಟೋಮೇಷನ್ ಪರೀಕ್ಷೆ ಪಾಸಾದ ನೋಂದಣಿ ಸಂಖ್ಯೆಯನ್ನು ನಮೂದಿಸಿದಾಗ ಅಭ್ಯರ್ಥಿಗಳ ಮಾಹಿತಿಗಳು AUTO FETCH ಆಗುತ್ತವೆ.
13. AUTO FETCH ಆದ ಮಾಹಿತಿಗಳನ್ನು ತಿದ್ದುಪಡಿ ಮಾಡಿಕೊಳ್ಳಲು ಅವಕಾಶವಿರುವುದಿಲ್ಲ.

**14.** ಅರ್ಜಿಗಳನ್ನು ಸ್ವೀಕರಿಸುವ ಅಂತಿಮ ದಿನಾಂಕದ ನಂತರ ಯಾವುದೇ ಮಾಹಿತಿಯ ತಿದ್ದುಪಡಿಗೆ ಅವಕಾಶವಿರುವುದಿಲ್ಲ.

15. ಸಂಸ್ಥೆಯ ಮುಖ್ಯಸ್ಥರು ಸಂಸ್ಥೆಯ ಲಾಗಿನ್‌ನಲ್ಲಿ ನಾಮಯಾದಿ ಪಟ್ಟಿಯನ್ನು (Nominal Roll) Down load ಮಾಡಿಕೊಂಡು ಪರಿಶೀಲಿಸಿ ಮೂಲ ಚಲನ್‌ನೊಂದಿಗೆ ಸಂಬಂಧಿಸಿದ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಸಲ್ಲಿಸುವುದು.

**16. ಅಭ್ಯರ್ಥಿಗಳು ಅರ್ಜಿಯನ್ನು ನೋಂದಾಯಿಸಿದ ಗಣಕಯಂತ್ರ ಶಿಕ್ಷಣ ಸಂಸ್ಥೆಯ ಲಾಗಿನ್‌ಗೆ ಅಭ್ಯರ್ಥಿಗಳ ಪ್ರವೇಶ ಪತ್ರಗಳನ್ನು Up load ಮಾಡಲಾಗುವುದು. ಪರೀಕ್ಷೆಗೆ ನೋಂದಾಯಿಸಿದ ಅಭ್ಯರ್ಥಿಗಳು ಸದರಿ ಸಂಸ್ಥೆಯಿಂದಲೇ ಪ್ರವೇಶ ಪತ್ರಗಳನ್ನು ಪಡೆಯುವುದು.**

17. ಮೇಲಿನ ಎಲ್ಲಾ ನಿಯಮಗಳನ್ನು ಸಂಬಂಧಪಟ್ಟ ಗಣಕಯಂತ್ರ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ತಪ್ಪದೇ ಪಾಲಿಸುವುದು.

**ಮಾರ್ಚ್-2021 ರ ಗಣಕಯಂತ್ರ ಶಿಕ್ಷಣ ಪರೀಕ್ಷೆಗೆ ಕೆಳಕಂಡ ದಾಖಲೆಗಳನ್ನು ಸಂಸ್ಥೆಯ ಮುಖ್ಯಸ್ಥರು ಸಂಬಂಧಿಸಿದ ಉಪನಿರ್ದೇಶಕರು (ಅಭಿವೃದ್ಧಿ) (ಡಯಟ್) ರವರಿಗೆ ಅಗತ್ಯ ದಾಖಲೆಗಳನ್ನು ದಿನಾಂಕ: 08.03.2021 ರೊಳಗೆ ಸಲ್ಲಿಸುವುದು ಕಡ್ಡಾಯ.**

1. ಮುಖಪುಟ (Covering letter)
2. ಶುಲ್ಕ ಪಾವತಿಸಿದ ಮೂಲ ನೆಫ್ಟ್ ಚಲನ್ **(ಕಡ್ಡಾಯವಾಗಿ ಸಂಸ್ಥೆಯ ಲಾಗಿನ್‌ನಲ್ಲಿ ಜನರೇಟ್ ಆದ ಚಲನ್ ಬಳಸುವುದು)**
3. Institute Login ನಲ್ಲಿ Down load ಮಾಡಿ ಕೊಳ್ಳಲಾದ ನಾಮಯಾದಿ ಪಟ್ಟಿ (Nominal Roll) **(ಆಫೀಸ್ ಆಟೋಮೇಷನ್ ಮತ್ತು ಗ್ರಾಫಿಕ್ ಡಿಸೈನರ್ ಕೋರ್ಸ್ ಪ್ರತ್ಯೇಕ)**
4. ಶಾಲಾ-ಸಂಕೇತ ನವೀಕರಣ ಶುಲ್ಕ ರೂ. 305/- ಪಾವತಿಸಿದ ಆನ್‌ಲೈನ್ ಮುದ್ರಿತ ಪ್ರತಿ.

**ಮಾರ್ಚ್-2021 ರ ಮಾಹೆಯ ಗಣಕಯಂತ್ರ ಶಿಕ್ಷಣ ಪರೀಕ್ಷೆಗೆ ಸಂಬಂಧಿಸಿದಂತೆ ಉಪನಿರ್ದೇಶಕರು (ಅಭಿವೃದ್ಧಿ) ರವರ ಪಾತ್ರ**

1. ಮಾರ್ಚ್-2021 ರ ಮಾಹೆಯ ಗಣಕಯಂತ್ರ ಶಿಕ್ಷಣ ಪರೀಕ್ಷೆಗೆ ಸಂಬಂಧಿಸಿದಂತೆ, ಪ್ರತಿ ಡಯಟ್‌ಗಳಿಗೂ Login ಗಳನ್ನು ನೀಡಲಾಗಿದೆ. ಸಂಬಂಧಪಟ್ಟ ಜಿಲ್ಲೆಯ ಗಣಕಯಂತ್ರ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಮಾರ್ಚ್-2021 ರ ಪರೀಕ್ಷೆಗೆ ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಗಳ ಮಾಹಿತಿಯನ್ನು ಮಂಡಳಿಯಿಂದ ಸಂಸ್ಥೆವಾರು ಸದರಿ ಲಾಗಿನ್‌ನಲ್ಲಿ ಲಭ್ಯಗೊಳಿಸಲಾಗುವುದು.

2. ಗಣಕಯಂತ್ರ ಶಿಕ್ಷಣ ಸಂಸ್ಥೆಗಳವರು ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸಿದ ಮಾಹಿತಿಗಳನ್ನು ಪರಿಶೀಲಿಸಿ ಡಯಟ್ Login ನಲ್ಲಿ ಅಭ್ಯರ್ಥಿಗಳ ಮಾಹಿತಿಯನ್ನು ಅನುಮೋದಿಸುವುದು ಅಥವಾ ತಿರಸ್ಕರಿಸುವುದು. (Approve/Reject)

3. ತಿರಸ್ಕೃತಗೊಂಡ ಅರ್ಜಿಗಳಿಗೆ Remarks ಕಾಲಂನಲ್ಲಿ ಸಕಾರಣವನ್ನು ನಮೂದಿಸುವುದು ಹಾಗೂ ಸರಿಯಾದ ಮಾಹಿತಿಯನ್ನು ಸಂಬಂಧಪಟ್ಟ ಸಂಸ್ಥೆಯವರು ನಿಗಧಿತ ಅವಧಿಯಲ್ಲಿ ಒದಗಿಸಿದಲ್ಲಿ ಮತ್ತೊಮ್ಮೆ ಅನುಮೋದಿಸಲು ಡಯಟ್ Login ನಲ್ಲಿ ಅವಕಾಶ ಕಲ್ಪಿಸಿದೆ.

4. ಗಣಕಯಂತ್ರ ಶಿಕ್ಷಣ ಪರೀಕ್ಷೆಗಳಿಗೆ ಸಂಬಂಧಿಸಿದಂತೆ, ಪರೀಕ್ಷಾ ಕೇಂದ್ರಗಳನ್ನು ಗುರುತಿಸುವುದು, ಪರೀಕ್ಷಾ ಕೇಂದ್ರದ ಅಗತ್ಯ ಮಾನವ ಹಾಗೂ ಭೌತಿಕ ಸಂಪನ್ಮೂಲಗಳನ್ನು ಉಪನಿರ್ದೇಶಕರು (ಅಭಿವೃದ್ಧಿ) ಒದಗಿಸುವುದು.

5. ಉಪನಿರ್ದೇಶಕರು (ಅಭಿವೃದ್ಧಿ) ರವರಿಂದ ಅನುಮೋದನೆಗೊಂಡ ನಂತರವೇ ಅಭ್ಯರ್ಥಿಗಳಿಗೆ ಪರೀಕ್ಷೆಗೆ ಹಾಜರಾಗಲು ಅವಕಾಶ ನೀಡಲಾಗುತ್ತದೆ.

6. ಮಾರ್ಚ್–2021 ರ ಗಣಕಯಂತ್ರ ಶಿಕ್ಷಣ ಪರೀಕ್ಷೆಗೆ ಸಂಸ್ಥೆಗಳಿಂದ ಸ್ವೀಕರಿಸಿದ ದಾಖಲೆಗಳನ್ನು ಖುದ್ದಾಗಿ ಅಥವಾ ರಿಜಿಸ್ಟರ್ಡ್ ಅಂಚೆ ಮೂಲಕ ಮಂಡಳಿಯ ಈ ಕೆಳಕಂಡ ವಿಳಾಸಕ್ಕೆ ತಲುಪಿಸುವುದು.

**ಶ್ರೀಮತಿ ಹೇಮಲತಾ ಡಿ. ನಾಯಕ್,**
**ಸಹಾಯಕ ನಿರ್ದೇಶಕರು ಮತ್ತು ಶಾಖಾಧಿಕಾರಿಗಳು,**
**ವಾಣಿಜ್ಯ ವಿಭಾಗ, 4ನೇ ಮಹಡಿ,**
**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ,**
**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 003.**
**ಮೊಬೈಲ್ ಸಂಖ್ಯೆ: 9686333455**
**ಮಂಡಳಿಯ ದೂರವಾಣಿ ಸಂಖ್ಯೆಗಳು : 080–23360073**

**ಹೆಚ್ಚಿನ ವಿವರಗಳಿಗಾಗಿ ಈ ಕೆಳಕಂಡ ಮಂಡಳಿಯ ಜಾಲತಾಣದಲ್ಲಿ ನೋಡುವುದು.**
**sslc.karnataka.gov.in**

**ಸೂಚನೆ:– ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಗೆ ಸಂಬಂಧಿಸಿದಂತೆ Flow chart ನ್ನು ಸಂಸ್ಥೆಯ ಲಾಗಿನ್‌ನಲ್ಲಿ ಲಭ್ಯ ಮಾಡಲಾಗಿದೆ. ಅದರಂತೆ ಕ್ರಮವಹಿಸಿ ಅರ್ಜಿಗಳನ್ನು ಆನ್‌ಲೈನ್‌ನಲ್ಲಿ Upload ಮಾಡುವುದು.**

16/2/2021
(ಎಸ್. ಗೀತಾ)
ನಿರ್ದೇಶಕರು
(ಇತರೆ ಪರೀಕ್ಷೆಗಳು)

**ಪ್ರತಿಗಳು :–**

1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಿದೆ.
2. ನಿರ್ದೇಶಕರು (ಇ.ಪ) ರವರ ಹಾಗೂ ಕಾರ್ಯದರ್ಶಿಗಳು ಆಪ್ತ ಶಾಖೆಗೆ.
3. ರಾಜ್ಯದ ಎಲ್ಲಾ ವಿಭಾಗೀಯ ಮಟ್ಟದ ಪ್ರಾದೇಶಿಕ ಪರೀಕ್ಷಾ ಮಂಡಳಿಯ ಕಾರ್ಯದರ್ಶಿಗಳು, ಬೆಂಗಳೂರು, ಮೈಸೂರು, ಕಲ್ಬುರ್ಗಿ ಮತ್ತು ಬೆಳಗಾಂ ವಿಭಾಗರವರಿಗೆ ಮುಂದಿನ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಮುಂದಿನ ಕ್ರಮಕ್ಕಾಗಿ.
5. ಹಿರಿಯ ಸಹಾಯಕ ನಿರ್ದೇಶಕರು, ವಾಣಿಜ್ಯ ಶಾಖೆ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗರಸ್ತೆ, ಬೆಂಗಳೂರು–1.
6. ಶಾಖಾಧಿಕಾರಿಗಳು ಕಂಪ್ಯೂಟರ್ ಶಾಖೆಯವರಿಗೆ ಸಂಬಂಧಪಟ್ಟ ಅಧಿಸೂಚನೆಯನ್ನು ವೆಬ್ ಸೈಟ್‌ನಲ್ಲಿ ಅಳವಡಿಸಲು ಸಲ್ಲಿಸಿದೆ.
7. ರಾಜ್ಯದ ಎಲ್ಲಾ ಗಣಕಯಂತ್ರ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಗೆ ಸೂಕ್ತ ಕ್ರಮಕ್ಕಾಗಿ.
8. ಕಛೇರಿ ಪ್ರತಿ.